# ವ್ರತಾಚಾರಿಣಿ ಅಕ್ಕಮ್ಮ

**ಡಾ.ಮಹಾದೇವಿ ಆರ್. ಹಿರೇಮಠ**
ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

ಸತ್ಯ ಶುದ್ಧ ಶಿವನಿಷ್ಠೆ ಮತ್ತು ತನ್ನ ವ್ರತಾಚಾರಗಳಿಂದ ಶರಣ ಸಮುದಾಯದಲ್ಲಿ ಅಗ್ಗಳದ ಹೆಗ್ಗಳಿಕೆಯನ್ನು ಪಡೆದಿದ್ದ ಅಕ್ಕಮ್ಮ ಹನ್ನೆರಡನೆಯ ಶತಮಾನದ ಶಿವಶರಣೆಯರಲ್ಲಿ ಒಬ್ಬಳು. ಈಕೆಯ ವೈಯಕ್ತಿಕ ಜೀವನದ ಬಗೆಗೆ ಯಾವುದೇ ಹೆಚ್ಚಿನ ಸಂಗತಿಗಳು ತಿಳಿದು ಬರುವುದಿಲ್ಲವಾದ್ದರಿಂದ ಸದ್ಯದ ಮಟ್ಟಿಗೆ ಇವಳನ್ನು ಶರಣ ಸಮುದಾಯದಲ್ಲಿ ಅನುಭವ ಮಂಟಪದ ವೈಚಾರಿಕ ಕಾರ್ಯ ಚಟುವಟಿಕೆಗಳಲ್ಲಿ ಕಾಯಕ ದಾಸೋಹಗಳ ಕುರಿತ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಓರ್ವ ಸತ್ಯಶೀಲ ವ್ರತಾಚಾರಿಣಿ ಸುಜ್ಞಾನಿ ಶಿವಶರಣೆ ಎಂಬುದಕ್ಕೆ ಇವಳ ವಚನಗಳ ಅಂಕಿತವಾದ 'ಆಚಾರಕ್ಕೆ ಪ್ರಾಣವಾದ ರಾಮೇಶ್ವರ ಲಿಂಗ' ಎಂಬ ಅಂಕಿತವಿರುವ ವಚನವೊಂದರಲ್ಲಿ ಅನುಭವ ಮಂಟಪದಲ್ಲಿರುವ ಅನೇಕ ಹಿರಿಯ ಶರಣರನ್ನು ಹೆಸರಿಸುವ ಮೂಲಕ ಅವಳು ಶರಣ ಸಮುದಾಯದಲ್ಲಿ ಸಕ್ರೀಯವಾಗಿದ್ದಳೆಂಬುದನ್ನು ಗುರುತಿಸಬಹುದು. ಸಂಖ್ಯಾಬಾಹುಳ್ಯದ ದೃಷ್ಟಿಯಿಂದ ಅಕ್ಕಮಹಾದೇವಿಯ ನಂತರದ ಸ್ಥಾನ ಅಕ್ಕಮ್ಮನಿಗೆ ಸಲ್ಲುತ್ತದೆ. ನಿಜ ಭಕ್ತನೊಬ್ಬನ ಧಾರ್ಮಿಕ ಮೌಲ್ಯಗಳಾದ ಶೀಲ, ವ್ರತ, ನೇಮ, ಆಚಾರಗಳು ಈಕೆಯ ಬಹುತೇಕ ವಚನಗಳ ಚರ್ಚೆಯ ವಸ್ತುವಾಗಿರುವದರಿಂದ ಅಕ್ಕಮ್ಮನನ್ನು ವ್ರತಾಚಾರಿಣಿ ಅಕ್ಕಮ್ಮನೆಂದೇ ಗುರುತಿಸಲ್ಪಟ್ಟಿದ್ದಾಳೆ. ಶಿವಭಕ್ತರು ಸಾಧನೆಯ ಮಾರ್ಗದಲ್ಲಿ ಅನುಸರಿಸಬೇಕಾದ ಷಟ್ಥಲ ಪಂಚಾಚಾರ ಅಷ್ಟಾವರಣ ವ್ರತ ಶೀಲ ನೇಮ ಆಚಾರ ಅನುಭಾವಗಳ ಕುರಿತು ತನ್ನ ವಚನಗಳಲ್ಲಿ ನಿರರ್ಗಳವಾಗಿ ಚರ್ಚಿಸಿದ್ದಾಳೆ.

> "ಬಸವಣ್ಣ, ಚೆನ್ನಬಸವಣ್ಣ ಪ್ರಭು, ವೀರಮಡಿವಳ, ನಿಜಗುಣ ಸಿದ್ದರಾಮ,
> ಮೋಳಿಗೆಯ ಮಾರಯ್ಯ ಆಯ್ದಕ್ಕಿಯ ಮಾರಯ್ಯ, ಏಕಾಂತರಾಮಯ್ಯ,
> ಅಜಗಣ್ಣ, ಶಕ್ತಿ, ಮುಕ್ತಿ, ಮಹಾದೇವಿಯಕ್ಕ ಮುಂತಾದ
> ಏಳು ನೂರೆಪ್ಪತ್ತು ಅಮರಗಣಂಗಳು ಕೊಟ್ಟ ವ್ರತಪ್ರಸಾದ.
> ಆ ಪ್ರಸಾದ ಎನಗೆ ಪ್ರಸನ್ನ, ನಿಮಗೆ ಮರ್ತ್ಯದ ಮಣಿಹ ಹಿಂಗುವನ್ನಕ್ಕ
> ಎನ್ನ ವ್ರತದಲ್ಲಿ, ಎನ್ನ ಆಚಾರದಲ್ಲಿ ನಾ ಹಿಡಿದ ನೇಮದಲ್ಲಿ,
> ಭಾಷೆಯಲ್ಲಿ ನಾ ತಪ್ಪಿದಡೆ, ತಪ್ಪ ಹೊತ್ತಲ್ಲಿ ನಿಮ್ಮ ಕೇಳಿದಡೆ
> ನಾ ಸತ್ತಿಹೆನೆಂದು ಕೂಡಿದಡೆ, ಮತ್ತೆ ಶಸ್ತ್ರ, ಸಮಾಧಿ
> ನೀರು ನೇಣು ವಿಷ ಔಷಧಿಯಿಂದ ಘಟವ ಬಿಟ್ಟಡೆ
> ನಿಮಗೆ ನಿಮ್ಮ ಪ್ರಮಥರಾಣೆ
> ಶ್ರೀಭಿನ್ನ ಚಿಹ್ನೆ ದೋರದಲ್ಲಿಯೇ
> ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವನ್ನಲ್ಲಿಯೆ ಲೀಯ"1

ಎಂಬುದಾಗಿ ವ್ರತನಿಷ್ಠೆಯ ಹಠವಾದಿಯಾಗಿ ಹಿರಿಯ ಶಿವಶರಣರ ಪ್ರಸಾದ ಭಾಗ್ಯದಿಂದ ಶಿವಭಕ್ತೆಯಾಗಿ ವ್ರತ–ಆಚಾರ–ನೇಮ–ನಿಷ್ಠೆಯನ್ನು ಪ್ರಾಣಕ್ಕಿಂತ ಅಧಿಕವಾಗಿ ಭಾವಿಸಿ, ವೀರ ನಿಷ್ಠೆಯನ್ನು ಪ್ರದರ್ಶಿಸಿದ ಶಿವಶರಣೆ ಅಕ್ಕಮ್ಮ.

ಬಸವಣ್ಣ, ಚೆನ್ನಬಸವಣ್ಣ ಅಲ್ಲಮ ಪ್ರಭು, ಸಿದ್ಧರಾಮ, ಮಹಾದೇವಿಯಕ್ಕ, ಮುಕ್ತಾಯಕ್ಕ ಮುಂತಾದ ಶಿವಶರಣ–ಶರಣೆಯರ ಸಮಕಾಲೀನ ಅನುಭಾವಿ, ಶಿವಶರಣರ ಪ್ರಗತಿಶೀಲ– ಮಾನವತಾವಾದಿ ಚಿಂತನಪರ ಧೋರಣೆಗಳಿಂದ ಪ್ರಭಾವಿತಳಾದ ಅಕ್ಕಮ್ಮ ಶರಣ ಧರ್ಮದ ಕಟ್ಟಾ ಅನುಯಾಯಿ. ಮಾಹೇಶ್ವರ ಗಣಾಚಾರ ನಿಷ್ಠೆಯ ಶಿವಭಕ್ತೆ. ವಚನಗಳ

ಸಂಖ್ಯೆಯ ದೃಷ್ಟಿಯಿಂದ ಅಕ್ಕಮಹಾದೇವಿಯ ತರುವಾಯ ಎರಡನೆಯ ಸ್ಥಾನದಲ್ಲಿ ನಿಲ್ಲಬಲ್ಲ ಇವಳ. ಉಪಲಬ್ಧ ವಚನಗಳ ಸಂಖ್ಯೆ ಒಟ್ಟು 153. ಶಿವಶರಣರ ವಚನರಚನೆಯ ವಿಧಾನ–ಅನುಭವ–ಅನುಭಾವಗಳನ್ನು ಮಾತಿನಲ್ಲಿ ಅಭಿವ್ಯಕ್ತಿಸುವ ಕಲೆಗಾರಿಕೆ, ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡ ಪ್ರತಿಭಾವಂತ ವಚನಕಾರ್ತಿಯಾಗಿದ್ದಾಳೆ. ಇತರ ಶರಣ ಶರಣೆಯರಿಗಿಂತ ತುಸು ಭಿನ್ನವಾಗಿ ಪ್ರೌಢವಾಗಿ ಆಲೋಚಿಸಬಲ್ಲ ಸಾಮುದಾಯಿಕ ಸ್ವಾಸ್ಥ್ಯಕ್ಕಾಗಿ ಹಂಬಲಿಸುವ ಅಕ್ಕಮ್ಮನ ಸಾಮಾಜಿಕ ಪ್ರಜ್ಞೆ ಅಪೂರ್ವವಾದುದು. ಸಮಕಾಲೀನ ಸಮಾಜದ ಜೀವನವಿಧಾನ, ಆಚಾರ–ವ್ಯವಹಾರ, ಧಾರ್ಮಿಕ ರೀತಿ ನೀತಿಗಳ ವಿಶ್ಲೇಷಣೆಯಲ್ಲಿ ಅಕ್ಕಮ್ಮನ ವಿಮರ್ಶಾತ್ಮಕ ಪ್ರಜ್ಞೆ ಹರಳುಗಟ್ಟಿದೆ. ಅಕ್ಕಮಹಾದೇವಿಯ ನಂತರ ಅಧಿಕ ಸಂಖ್ಯೆಯಲ್ಲಿ ವಚನ ರಚಿಸಿದ ಹಿರಿಮೆ ಅಕ್ಕಮ್ಮಳದು. ಶೈಕ್ಷಣಿಕ– ಧಾರ್ಮಿಕ–ಸಾಮಾಜಿಕ ಅವಕಾಶಗಳು ಮಹಿಳೆಗೆ ಶೂನ್ಯವಾಗಿದ್ದ ಸಂದರ್ಭದಲ್ಲಿ ಅಕ್ಕಮ್ಮನಂಥ ಸಾಮಾನ್ಯ ವರ್ಗದ ಮಹಿಳೆ ಸ್ವಾನುಭವಕ್ಕೆ ದನಿ ನೀಡಿದುದು, ಜಡ ವ್ಯವಸ್ಥೆಯ ಪರಿವರ್ತನೆಗೆ ಪ್ರಾಮಾಣಿಕವಾಗಿ ಪ್ರತಿಕ್ರಿಯಿಸಿದುದು ಮಹತ್ವದ ಸಂಗತಿಯಾಗಿದೆ. ವಿಭಿನ್ನ ವರ್ಗ ಸ್ತರಗಳಿಗೆ ಸಂಬಂಧಿಸಿದ ನೂರಾರು ಸ್ತ್ರೀ–ಪುರುಷರು ಆಧ್ಯಾತ್ಮ ಸಾಧಕರಾಗಿ, ಸಾಮಾಜಿಕ ಚಿಂತಕರಾಗಿ ಅನುಭಾವ ಸಾಹಿತ್ಯ ರಚಿಸುವಂತೆ ಪ್ರೇರೇಪಿಸಿದ ಶರಣ ಯುಗದ ಸಾಂಸ್ಕೃತಿಕ ಒತ್ತಡಗಳು, ಸಾಂದರ್ಭಿಕ ಅಗತ್ಯಗಳು, ವೈಚಾರಿಕ ಪರಿಸರ ನಿರ್ಮಾಣದ ಪ್ರಯತ್ನಗಳ ಇತಿಹಾಸ ಕುತೂಹಲಕಾರಿಯಾದ ಅಧ್ಯಯನವಾಗಿದೆ.

ಜಾತಿ–ವರ್ಗಗಳಂತೆ ಲಿಂಗ ತಾರತಮ್ಯದ ನಂಬಿಕೆ ಸಂಪ್ರದಾಯವಾಗಿ ಮಾನವಜನಾಂಗದ ಇತಿಹಾಸದುದ್ದಕ್ಕೂ ಅಶಕ್ತ ವರ್ಗದ ಮೇಲೆ ಅಟ್ಟಹಾಸ ನಡೆಸಿದೆ. ಹೆಣ್ಣನ್ನು ನಿಕೃಷ್ಟವಾಗಿ ಪರಿಗಣಿಸಿ ಆಕೆಯ ಪ್ರತಿಭೆಯನ್ನು ನಿರಂತರ ದಮನಗೊಳಿಸಿದೆ. ಇಥ ಕೃತಿಯನ್ನು ಶರಣರು ಖಂಡಿಸಿದ್ದಾರೆ. ಸಮಾಜ–ಧರ್ಮ–ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದ ಅನೇಕ ಮೂಢ ನಂಬಿಗೆಗಳನ್ನು ಬುದ್ಧಿ–ಅನುಭವ–ಅನುಭಾವದ ಪ್ರಾಮಾಣ್ಯದಿಂದ ವಿಶ್ಲೇಷಿಸಿ ವಿಮರ್ಶಿಸಿ ಸರ್ವಾಂಗ ಪರಿಪೂರ್ಣ ಪ್ರಗತಿಶೀಲ ಸಮಾಜ ರಚನೆಗಾಗಿ ಶ್ರಮಿಸಿ ಮಹಿಳಾ ವೈಚಾರಿಕ ಕ್ರಾಂತಿಯ ಹರಿಕಾರರಾದರು. ಸರಳ ಸಹಜ ಬದುಕಿಗೆ ಪ್ರಾಶಸ್ತ್ರ ನೀಡಿ, ಶ್ರೇಷ್ಠ–ಕನಿಷ್ಠ, ಹೆಣ್ಣು–ಗಂಡು, ತಾರತಮ್ಯಗಳಿಗೆ ಕಾರಣವಾದ ಅಜ್ಞಾನ–ಸ್ವಾರ್ಥಗಳನ್ನು ಖಂಡಿಸಿ ಸತ್ಯ–ಶುದ್ಧ–ಪ್ರಾಮಾಣಿಕ ಬದುಕಿನ ರಾಜಮಾರ್ಗವನ್ನು ಅನಾವರಣಗೊಳಿಸಿದ್ದು, ಸಮಾಜದ ದುರ್ಬಲ ನಿರ್ಲಕ್ಷಿತ ಜನಸಮುದಾಯಕ್ಕೆ ನೈತಿಕ ಶಕ್ತಿಯಾಗಿ ಬೆಂಬಲವಾಗಿ ನಿಂತು, ಅವರಲ್ಲಿ ಆತ್ಮವಿಶ್ವಾಸ ಆಲೋಚನಾ ಶಕ್ತಿಗಳನ್ನು ಮೂಡಿಸಿದ್ದು ಶರಣರ ಆಂದೋಲನದ ಒಂದು ಅರ್ಥಪೂರ್ಣವಾದ ಹೆಜ್ಜೆಯಾಗಿದೆ.

ವ್ಯವಸ್ಥೆಯ ಕಟ್ಟುಪಾಡುಗಳ ಫಲವಾಗಿ ಪರಾವಲಂಬಿತನ, ಕೀಳರಿಮೆ ಅಜ್ಞಾನದಿಂದ ಮೂಕರಾಗಿದ್ದ ಮಹಿಳೆಯರು ಶತಮಾನಗಳ ಶೃಂಖಲೆಗಳನ್ನು ಹರಿದೊಗೆದು ವೈಚಾರಿಕ ಜಾಗೃತಿ ಆಧ್ಯಾತ್ಮ ಸಾಧನೆಗೆ ಸಿದ್ದರಾದುದು ಶರಣರ ಆಂದೋಲನದ ಅನನ್ಯ ದಾಖಲೆಯಾಗಿದೆ. ವೇದ–ಆಗಮ–ಸ್ಮೃತಿಗಳು ಹುಟ್ಟು ಹಾಕಿದ್ದ ಸ್ತ್ರೀಸಂಬಂಧೀ ಆಲೋಚನೆಗಳು ಮಹಿಳೆಯರ ಅಂತಃಶಕ್ತಿಯನ್ನು, ಬೌದ್ಧಿಕ ಸಾಮರ್ಥ್ಯವನ್ನು ಸಂಪೂರ್ಣವಾಗಿ ಕಮರಿಸಿದ್ದವು. ಸಾಮಾಜಿಕ ಅನ್ಯಾಯದಿಂದ, ಶೈಕ್ಷಣಿಕ ಅವಕಾಶಗಳಿಲ್ಲದೇ, ಪುರುಷಪ್ರಧಾನ ವ್ಯವಸ್ಥೆಯ ಗಾಣದ ಎತ್ತುಗಳಂತೆ ಬದುಕುತ್ತಿದ್ದ ಮಹಿಳೆಯರ ದಾರುಣ ಇತಿಹಾಸ–ವರ್ತಮಾನದ ಅರಿವುಳ್ಳ ಶರಣರು, ಇಂಥ ಪ್ರತಿಗಾಮಿ ವ್ಯವಸ್ಥೆಯ ಪರಿವರ್ತನೆಗೆ ತೀವ್ರವಾಗಿ ವೈಚಾರಿಕ ಹೋರಾಟ ನಡೆಸಿದರು. ಶರಣರ ಧೋರಣೆಗಳಿಗೆ ಸಕ್ರಿಯವಾಗಿ ಪ್ರತಿಕ್ರಿಯಿಸಿದ ಅನೇಕ ಜಾಗೃತ ಮಹಿಳೆಯರು ಅನ್ಯಾಯ–ಅಸಮಾನತೆಗಳನ್ನು ಪ್ರಶ್ನಿಸಲಿಲ್ಲ. ಬದಲಿಗೆ ಬೌದ್ಧಿಕ ಪ್ರೌಢಿಮೆಯನ್ನು ಪ್ರದರ್ಶಿಸಿದರು. ಸಮಷ್ಟಿಯ ವಿಸ್ತೃತ ಅನುಭವಕ್ಕೆ ಸ್ಪಂದಿಸಿ, ವೈಚಾರಿಕವಾಗಿ ಚಿಂತಿಸಿ, ಆಧ್ಯಾತ್ಮಿಕವಾಗಿ ಅರಳಿಕೊಂಡು, ಸ್ತ್ರೀ ಶಕ್ತಿಯ ಅವ್ಯಕ್ತ ನೆಲೆಗಳನ್ನು ಪ್ರಕಟಪಡಿಸಿದುದು ಗಮನಾರ್ಹ.

ಶರಣರ ಸಾಮಾಜಿಕ ಶುದ್ದೀಕರಣದ ಹೋರಾಟ ಸಕಲ ಜೀವ ಕ್ಷೇಮ ಚಿಂತನೆಗಳಿಂದ ಸ್ಫೂರ್ತಿ ಪಡೆದ, ಅಕ್ಕಮ್ಮ, ಲಕ್ಕಮ್ಮ, ರಾಯಮ್ಮ, ಮುಕ್ತಾಯಕ್ಕ, ಮಹಾದೇವಿಯಕ್ಕನಂಥ ಅನೇಕ ಮಹಿಳೆಯರು ಮೊದಲ ಬಾರಿಗೆ ದನಿಯೆತ್ತಿ ಮಾತನಾಡಿದ್ದು, ಪ್ರಶ್ನಿಸಿದ್ದು, ಚರ್ಚಿಸಿದ್ದು, ನಿರ್ಣಯಗಳನ್ನು ಸಾರಿದ್ದರ ಫಲವಾಗಿ ಅವರ ಸ್ವಾನುಭವ, ಲೋಕಾನುಭವದ ವಿವಿಧ ಆಯಾಮಗಳು ಶರಣೆಯರ ವಚನಗಳಲ್ಲಿ ಸ್ಪಷ್ಟವಾಗಿ ಪಡಿಮೂಡಿವೆ. ಕನ್ನಡ ಸಾಹಿತ್ಯ ಸಂದರ್ಭದ ಚಾರಿತ್ರಿಕ ಆಂದೋಲನದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯನ್ನು ದಾಖಲಿಸುವ ಆಕರ ಸಾಮಗ್ರಿಗಳಾಗಿವೆ.

ಮಹಿಳೆಯ ಶರೀರ–ಜನನ–ಜೀವನ ಕುರಿತಾದ ಪಾರಂಪರಿಕ ವಿಚಾರಗಳನ್ನು ಶರಣರು ಪುನರ್ ವಿಮರ್ಶಿಸಿದರು. ಸ್ಥಗಿತ ವ್ಯವಸ್ಥೆಗೆ ಪರ್ಯಾಯವಾಗಿ ರಚನಾತ್ಮಕ ಜೀವನ ವಿಧಾನಗಳನ್ನು ಪ್ರತಿಪಾದಿಸಿದರು. ಮಹಿಳೆಯ ವ್ಯಕ್ತಿತ್ವವನ್ನು, ಸಂವೇದನೆಗಳನ್ನು ಗೌರವಿಸಿದ ಫಲವಾಗಿ, ಅಂದಿನ ಸ್ತ್ರೀ ಸಮುದಾಯದಲ್ಲಿ ಆತ್ಮವಿಶ್ವಾಸದ, ಆತ್ಮ ಸನ್ಮಾನದ ಹೊಸ ಎಚ್ಚರ ಮೂಡುವಂತಾಯಿತು. ಕಾಯಕ ಸಿದ್ಧಾಂತದಿಂದ ಸ್ವಾವಲಂಬನೆಯ ಬೆಳಕು ಪ್ರವೇಶಿಸಿತು. ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಶರಣರ ವಿಮುಕ್ತ ಜೀವಪರ ಧೋರಣೆಗಳ ಪರಿಣಾಮವಾಗಿ ದಮನಕಾರಿ ಜೀವವಿರೋಧಿ ಒಕ್ಕಟ್ಟುಗಳಿಂದ ವಿಮೋಚನೆಗೊಂಡ ಮಹಿಳೆಯರು ಧರ್ಮ–ಸಮಾಜ ಸ್ವಾನುಭವ ಸಂಬಂಧಿಯಾದ ಸಂವೇದನೆಗಳನ್ನು ವಚನಗಳ ಮೂಲಕ ಅಭಿವ್ಯಕ್ತಿಸಿದರು. ಅನುಭಾವ ಗೋಷ್ಠಿಯ ಆಧ್ಯಾತ್ಮಿಕ ಚರ್ಚೆಗಳಲ್ಲಿ ಪಾಲ್ಗೊಂಡು ಅನುಭಾವ ಸಾಹಿತ್ಯ ರಚಿಸಿದರು. ಮಹಿಳೆಯರಿಗೆ ಮುಚ್ಚಿದ ಬಾಗಿಲುಗಳಾಗಿದ್ದ ಭಕ್ತಿ–ಜ್ಞಾನ–ವೈರಾಗ್ಯ–ಯೋಗ ಮಾರ್ಗಗಳಲ್ಲಿ ಸಮರ್ಥ ಸಾಧಕಿಯರಾಗಿ ಶ್ರೇಷ್ಠ ಅನುಭಾವಿಗಳಾದರು. ತತ್ಫಲವಾಗಿ ಹರನೇ ಗಂಡನಾಗಬೇಕೆಂದು ಅನಂತ ಕಾಲ ತಪಸ್ಸಿಸಿದ್ದ ಅಕ್ಕಮಹಾದೇವಿ 'ಶರಣ ಸತಿ, ಲಿಂಗ ಪತಿ' ತತ್ವದ ಜೀವಂತ ನಿದರ್ಶನವಾಗಿ, ವೀರ ವಿರಾಗಿಣಿಯಾಗಿ ತನ್ನ ಅಸಾಧಾರಣ ಸಿದ್ಧಿ, ಮೌಲಿಕ ವಚನ ಸಾಹಿತ್ಯ ರಚನೆಯಿಂದ ಶ್ರೇಷ್ಠ ಅನುಭಾವಿ ಕವಯತ್ರಿಯಾದರೆ. ನೀಲಾಂಬಿಕೆ. ಗಂಗಾಂಬಿಕೆ, ಅಕ್ಕ ನಾಗಮ್ಮ, ಅಕ್ಕಮ್ಮ, ಲಕ್ಕಮ್ಮ, ಲಿಂಗಮ್ಮ, ಮಹಾದೇವಿಯಮ್ಮ ಮೊದಲಾದ ಶರಣೆಯರು ಲೌಕಿಕ ಪಾರಲೌಕಿಕದ ಅರ್ಥಪೂರ್ಣ ಸಮನ್ವಯ ಸಾಧಿಸಿದರು. ಅನಾದರಣೆಗೊಳಗಾಗಿದ್ದ ನಿರ್ಲಕ್ಷಿತ ಸ್ತರದ ಕಾಳವ್ವ, ಸಂಕವ್ವೆ, ರೆಮ್ಮವ್ವೆ, ರೇಚವ್ವೆ, ಸತ್ಯಕ್ಕ, ಸೋಮವ್ವೆ, ಕಾಮಮ್ಮ, ಗಂಗಮ್ಮ ಮುಂತಾದ ಮಹಿಳೆಯರು ಸಾಧಿಸಿಕೊಂಡ ಅರಿವಿನ ಹೊಸ ಕ್ಷಿತಿಜಗಳು ಹಾಗೂ  ಲಭಿಸಿದ ಅಭಿವ್ಯಕ್ತಿ ಸ್ವಾತಂತ್ರ್ಯದ ಫಲವಾಗಿ ಎಲ್ಲ ಶರಣೆಯರು ವ್ರತ, ಶೀಲ, ನೇಮ, ಅರಿವು, ಆಚಾರ, ಅಂತರಂಗ ವಿಮರ್ಶೆಗಳ ಕುರಿತು, ಅನುಭಾವ, ಆತ್ಮಾನುಸಂಧಾನ, ಆಧ್ಯಾತ್ಮಿಕ ಸ್ವಾತಂತ್ರ್ಯದ ಕುರಿತು ಮುಕ್ತವಾಗಿ ಮಾತನಾಡುವಂತಹ ಪರಿಸರ ನಿರ್ಮಾಣವಾಗಿದ್ದರ ಫಲವಾಗಿ ಅಸಂಖ್ಯ ಸಂಖ್ಯೆಯ ವಚನಗಳು ರಚನೆಗೊಂಡು ಅಂದಿನ ಸಮಾಜದಲ್ಲಿ ಕನಿಷ್ಠ ವರ್ಗಕ್ಕೆ ತಳ್ಳಲ್ಪಟ್ಟ ಮಹಿಳೆಯರ ಧ್ವನಿಗಳು ದಾಖಲಾಗುವವಷ್ಟರ ಮಟ್ಟಿಗೆ ಅಕ್ಕಮ್ಮನಂತಹ ಅಕ್ಷರ ಜ್ಞಾನವನ್ನು ಅರಿಯದ ಮಹಿಳೆಯರೂ ಮುಕ್ತವಾಗಿ ಮಾತನಾಡುವಂತಾಯಿತು. "ಪ್ರಸ್ತುತ ಅಕ್ಕಮ್ಮನಿಗೆ ರೆಮ್ಮವ್ವೆ ಎಂಬ ಇನ್ನೊಂದು ಹೆಸರು ಇತ್ತೆಂದು ಕವಿಚರಿತೆಕಾರರು ಉಲ್ಲೇಖಿಸಿದ್ದಾರೆ."2 ಅಕ್ಕಮ್ಮ ಅಮ್ಮ ಹೆಸರೊಂದನ್ನು ಬಿಟ್ಟರೆ ಈಕೆಯ ಜೀವನ ವೃತ್ತಾಂತಕ್ಕೆ ಸಂಬಂಧಿಸಿದ ಯಾವುದೇ ಹೆಚ್ಚಿನ ವಿವರಗಳು ಲಭ್ಯವಿರುವುದಿಲ್ಲ.

ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ ಅಂಕಿತದ ವಚನಕರ್ತೃ ರೆಮ್ಮವ್ವೆ (ಅಕ್ಕಮ್ಮ) ವಚನಕಾರರ ಸಮಕಾಲೀನಳಾಗಿದ್ದರಿಂದ ಕ್ರಿ.ಶ. ಸುಮಾರು 1160ರಲ್ಲಿ ಜೀವಿಸಿದ್ದಳೆನ್ನುವ ಅಭಿಪ್ರಾಯ ಸಹಜವಾಗಿದೆ. ಇದೇ ಅಂಕಿತದ ಮೂರು ವಚನಗಳು ಸಕಲ ಪುರಾತನರ ವಚನಗಳು ಕಟ್ಟಿನಲ್ಲಿ ಅಕ್ಕಮ್ಮನ ಹೆಸರಿನಡಿಯಲ್ಲಿ ಸಂಕಲನಗೊಂಡಿವೆ. ಕೋಲ ಶಾಂತಯ್ಯನಿಂದ ಆರಂಭವಾಗುವ ಸಕಲ ಪುರಾತನರ ವಚನಗಳು ಕಟ್ಟಿನಲ್ಲಿ 'ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ' ಅಂಕಿತದ 152 ವಚನಗಳು ಏಲೇಶ್ವರ ಕೇತಯ್ಯನ ಹೆಸರಿನಡಿಯಲ್ಲಿ ಸಂಕಲನಗೊಂಡಿವೆ. ಇವುಗಳಲ್ಲಿ ಕವಿ ಚರಿತೆಕಾರರು ಅಕ್ಕಮ್ಮನ ವಚನಗಳೆಂದು ಗುರುತಿಸಿದ, ಗೊಗ್ಗವ್ವೆಯಿಂದ ಪ್ರಾರಂಭವಾಗುವ ಸಕಲ ಪುರಾತನರ ವಚನ ಕಟ್ಟಿನಲ್ಲಿ ಅಕ್ಕಮ್ಮನ ಹೆಸರಿನಡಿಯಲ್ಲಿ ಸಂಕಲಿಸಿದ ತಲಾ ಎರಡು ಮತ್ತು ಮೂರು ವಚನಗಳೂ ಬೆರೆತುಕೊಂಡಿರುವುದು ಹೆಚ್ಚಿನ ವಿವರಣೆಗಳನ್ನು ಬಯಸುವಂತಿದೆ. ಇದನ್ನೆಲ್ಲ ಪರಿಶೀಲಿಸಿದ ಡಾ. ಆರ್. ಸಿ. ಹಿರೇಮಠ ಅವರು ಎಲ್ಲ ಮೂಲಗಳಿಂದ ಲಭ್ಯವಾದ 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' ಅಂಕಿತದ 153 ವಚನಗಳನ್ನು 'ಅಕ್ಕಮ್ಮನ ವಚನಗಳು' ಎಂದು ಗುರುತಿಸಿ ಪ್ರಕಟಿಸಿದ್ದಾರೆ.'3

ಅಕ್ಕಮ್ಮನ ವಚನಗಳಲ್ಲಿ ವ್ರತ–ಆಚಾರ–ಶೀಲ ಸಂಬಂಧೀ ವಿಚಾರಗಳು, ಕಾಯಕ ಗುರು–ಲಿಂಗ–ಜಂಗಮ ಪ್ರಸಾದ ನಿಷ್ಠೆಗೆ ಸಂಬಂಧಿಸಿದ ವಿವರಣೆಗಳು ಅಧಿಕವಾಗಿವೆ. ಆಚಾರ–ವ್ರತನಿಷ್ಠೆಯ ಸ್ಥಾಯಿಯಲ್ಲಿಯೇ ವಿಕಾಸಗೊಳ್ಳುವ ಅಕ್ಕಮ್ಮನ ಭಕ್ತಿಯ ಸ್ವರೂಪ ವಿಶಿಷ್ಟವಾದುದು. ಮಾಹೇಶ್ವರ ನಿಷ್ಠೆಯ ನೆಲೆಯಿಂದ ಪ್ರಸಾದ ಭಾವದ ಭಕ್ತಿಯಾಗಿ ವಿಕಾಸಗೊಂಡು ಪರಿಪೂರ್ಣತೆಯತ್ತ ಹಬ್ಬಿಕೊಳ್ಳುವ ನಿರಂತರ ತುಡಿತ ಅಕ್ಕಮ್ಮನ ವ್ಯಕ್ತಿತ್ವದ ಸತ್ವವಾಗಿದೆ. ತನ್ನ ನಿಲುವುಗಳನ್ನು ಅತ್ಯಂತ ಸ್ಪಷ್ಟವಾಗಿ ಪ್ರತಿಪಾದಿಸುವ ಅಕ್ಕಮ್ಮನಿಗೆ ವ್ರತ–ಆಚಾರಗಳು ಬಹಿರಂಗದ ಕ್ರಿಯೆಗಳು ಮಾತ್ರವಾಗಿರದೇ ಭಾವಶುದ್ಧಿ, ಕ್ರಿಯಾ ಶುದ್ಧಿಯ ಮಾನದಂಡಗಳಾಗಿವೆ. ವ್ರತವನ್ನು ವ್ಯಾಖ್ಯಾನಿಸುವ ಅಕ್ಕಮ್ಮನ ವಚನಗಳಲ್ಲಿ' ವ್ರತವೆಂದರೆ ಲೌಕಿಕ–ದೈನಂದಿನ

ಆಚರಣೆಗಳನ್ನು ಅರಿಷಡ್ವರ್ಗಾದಿಗಳನ್ನು ಪಾರಮಾರ್ಥಿಕ ಸಾಧನೆಗೆ ಸಜ್ಜುಗೊಳಿಸುವ ಪರಿಷ್ಕರಿಸುವ ಕಮ್ಮಟಗಳೆನ್ನುವ ವಿಶಿಷ್ಟ ಅರ್ಥವಿದೆ.

"ವ್ರತವೆಂಬುದೇನು? ವಸ್ತುವ ಕಾಂಬುದಕ್ಕೆ ನಿಚ್ಚಣಿಕೆ.

ವ್ರತವೆಂಬುದೇನು? ಇಂದ್ರಿಯಗಳ ಸಂದಮುರಿದ ಕುಲಕುಠಾರ.

ವ್ರತವೆಂಬುದೇನು? ಸಕಲ ವ್ಯಾಪಕಕ್ಕೆ ದಾವಾನಳ.

ವ್ರತವೆಂಬುದೇನು? ಸರ್ವದೋಷನಾಶನ

ವ್ರತವೆಂಬುದೇನು? ಚಿತ್ರ ಸುಯಿಧಾನದಿಂದ

ವಸ್ತುವ ಕಾಂಬುದಕ್ಕೆ ಕಟ್ಟಿದ ಗುತ್ತಿಗೆ"4

ವ್ರತವೆಂಬುದೇನು? ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವು ಅವರಿಗೆ ತತ್ರಲಮಗನಾಗಿಪ್ಪನು ವ್ರತವೆಂಬುದೇನು? ಮನವಿಕಾರಿಸುವುದಕ್ಕೆ ಕಟ್ಟಿದ ಗೊತ್ತು ಜಗದ ಕ್ರೋಧಿಯಂತೆ ಕ್ರೋಧಿಸದೆ ಜಗದ ಲೋಭಿಯಂತೆ ಲೋಭಿಸದೆ ಮಾಯಾ ಮೋಹಂಗಳು ವರ್ಜಿತವಾಗಿ ಮನ ಬಂದಂತೆ ಆಡದೆ, ತನುಬಂದಂತೆ ಕೊಡದೆ ವ್ರತದಂಗಕ್ಕೆ ಸಂಗವಾಗಿ ನಿಂದ ಸದ್ಭಕ್ತನ ಅಂಗವೆ ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಂಗ.

ಒಟ್ಟಾರೆ ವ್ರತವು ಜೀವಾತ್ಮದ ಅಧೋಮುಖ ಪ್ರವತ್ತಿಗಳನ್ನು ನಿಗ್ರಹಿಸಿ ಅವಧರಿಸುವ ಕುಲಕುಠಾರ ಹೀಗೆ ವ್ರತ ಮಹಿಮೆಯ ನಾನಾ ನೆಲೆಗಳನ್ನು ವಿವರಿಸುವ ಅಕ್ಕಮ್ಮನ ವಿಶ್ಲೇಷಣೆ ಅನೇಕ ವಚನಗಳಿಗೆ ವಸ್ತುವಾಗಿದೆ. ಬೀಗಿ ಬೆಳೆದ ಹೊಲಕ್ಕೆ ಬೇಲಿ ರಕ್ಷಣೆ ನೀಡುವಂತೆ ಬೇವ ನೋವ ಕಾಯಕ್ಕೆ ಅರಿವೆಂಬ ಬೆಳಗೇ ಬೇಲಿಯೆನ್ನುತ್ತಾಳೆ (ವ. 131) ಬಹಿರಂಗದ ವ್ರತ ಅಂತರಂಗದ ಅರಿವು–ಕ್ರಿಯಾ–ಜ್ಞಾನ ಸಾಮರಸ್ಯವೇ ಪರಮಾತ್ಮನ (ವ. 77) ಆವಾಸಸ್ಥಾನ.

'ಪರಸ್ತ್ರೀ ಪರಧನಂಗಳಲ್ಲಿ ನಿಂದೆಗೆ ಒಡಲಾಗದಿರ್ಪುದೇ ವ್ರತ, ಸರ್ವಭೂತ ಹಿತನಾಗಿ ದಯವಿದ್ದುದೆ ವ್ರತ' ಎನ್ನುವಲ್ಲಿ ನೀತಿ–ದಯೆ–ದುಡಿಮೆ–ಆತ್ಮ ಸನ್ಮಾನದ ಪ್ರಾಮಾಣಿಕ ಬದುಕೇ ವ್ರತ ಎನ್ನುವ ವಿಶಾಲ ದರ್ಶನ ಅಕ್ಕಮ್ಮನದಾಗಿದೆ. ಬಯಕೆ ಬರಿದಾಗಿ, ಭ್ರಾಮಕ ಸ್ಥಿತಿಯಿಂದ ಮುಕ್ತನಾಗಿ ನಿರ್ವಿಕಾರಭಾವದಿಂದ ಪರಮಾತ್ಮನ ಸಾನ್ನಿಧ್ಯ ಹಾರೈಸುವ ಭಕ್ತನ ನಿರ್ಮುಕ್ತ ಸ್ಥಿತಿಯನ್ನೇ ನಿಜವಾದ ಜಂಗಮರೆಲ್ಲರಿಗೂ ಆಚಾರ ಪಾಲನೆ ಅತ್ಯಗತ್ಯ. ಆಚಾರವೆಂದರೆ ಸುಜ್ಞಾನ ಸ್ವರೂಪಿ ಪರತತ್ತ್ವದ ಅರಿವು,

"ಗುರುವಾದಡೂ ಆಚಾರಭ್ರಷ್ಟನಾದಡೆ ಅನುಸರಿಸಲಾಗದು

ಲಿಂಗವಾದಡೂ ಆಚಾರದ್ರೋಹಳವಾದಲ್ಲಿ ಪೂಜಿಸಲಾಗದು,

ಜಂಗಮವಾದಡೂ ಆಚಾರ ಅನುಸರಣಿಯಾಗದಲ್ಲಿ ಕೂಡಲಾಗದು,

ಆಚಾರವೇ ವಸ್ತು, ವ್ರತವೇ ಪ್ರಾಣ, ಕ್ರಿಯೆಯೆ ಜ್ಞಾನ,

ಜ್ಞಾನವೆ ಆಚಾರ, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವು ತಾನೆ"5

ಗುರುವಿಂಗೆ ತನುವನರ್ಪಿಸಿ, ಲಿಂಗಕ್ಕೆ ಮನವನರ್ಪಿಸಿ, ಜಂಗಮಕ್ಕೆ ಧನವನರ್ಪಿಸಿ ತ್ರಿವಿಧಕ್ಕೆ ತ್ರಿವಿಧವ ಕೊಟ್ಟು ತನ್ನ ವ್ರತಕ್ಕೆ ಭಿನ್ನ ಭಾವವಿಲ್ಲದೆ ನಿಂದುದೆ ನೈಜವಾದ ವ್ರತ. ಒಟ್ಟಾರೆ ಹೊರಗಣ ಮಾಟ ಒಳಗಣ ಕೂಟ ಉಭಯ ಶುದ್ಧವಾದುದೇ ವ್ರತ. ಅಕ್ಕಮ್ಮನ ನೂರಾರು ವಚನಗಳಲ್ಲಿ ವ್ಯಾಪಿಸಿಕೊಂಡಿರುವ ವ್ರತ–ಶೀಲ–ಆಚಾರ ಮೀಮಾಂಸೆಯ ಸಂದರ್ಭದಲ್ಲಿ ಉಲ್ಲೇಖಗೊಂಡಿರುವ ಸಮಕಾಲೀನ ಸಮಾಜದ ರೀತಿ–ನೀತಿ–ದೈನಂದಿನ ವ್ಯವಹಾರ–ಸಂಪ್ರದಾಯಗಳ ವಿವರಗಳು ಸಾಮಾಜಿಕ ಅಧ್ಯಯನಕ್ಕೆ ಭಕ್ತರಿಗೆ ಭಾವಶುದ್ಧವಾಗಿರಬೇಕಾದಂತೆ, ದೈನಂದಿನ ವ್ಯವಹಾರಗಳಲ್ಲಿ ಆಚಾರ ಶುದ್ಧಿಯೂ

ಅಗತ್ಯವೆನ್ನುತ್ತಾಳೆ. ಸಹಭೋಜನ, ರಕ್ತ ಸಂಬಂಧ, ಕೊಡುಕೊಳ್ಳುವಿಕೆ ಇತ್ಯಾದಿ ವಿಚಾರಗಳಲ್ಲಿ ಸ್ವಜಾತಿ–ಭಕ್ತಕುಲದ ಎಚ್ಚರದ ಅಗತ್ಯವನ್ನು ವಿವರಿಸಿದ್ದಾಳೆ.6

ವಿಷಮ ದಾಂಪತ್ಯವನ್ನು ವಿರೋಧಿಸುವ ಶರಣರು, ವಿಷಮ ಕುಟುಂಬಗಳನ್ನು ಮೆಚ್ಚುವುದಿಲ್ಲ. ತಂದೆ ತಾ ವ್ರತಿಯಾಗಿ, ಮಕ್ಕಳು ಹೆಂಡತಿ, ಬಂಧುಬಳಗದವರು ಆಚಾರಕ್ಕೆ ಹೊರಗಾದರೆ ವ್ರತ ಭಂಗವಾದಂತೆ. ಆದ್ದರಿಂದ ಸಹಬಾಳ್ವೆ, ರಕ್ತ ಸಂಬಂಧ ಸಾಧ್ಯವಾಗಬೇಕಾದರೆ ಭಕ್ತನು ತನ್ನಂಗ ಮನ ಭಾವ ಕರಣಂಗಳಲ್ಲಿ ಸಂಗದಲ್ಲಿ ಇದ್ದವರಿಗೆಲ್ಲಕ್ಕೂ ತನ್ನಂಗದ ವ್ರತವ ಮಾಡಬೇಕೆನ್ನುತ್ತಾಳೆ.

ಅಕ್ಕಮ್ಮನ ಆಚಾರನಿಷ್ಠೆ ಪ್ರಶ್ನಾತೀತವಾದುದು, ಮದ್ಯಪಾನ, ಮಾಂಸಾಹಾರ, ಪರದಾರ ಗಮನ, ಹುಸಿ ನುಸುಳು ಕೊಲೆ (ವ.126) ಮುಂತಾದ ಅನೈತಿಕ ವ್ಯವಹಾರಗಳುಳ್ಳ ಅನಾಚಾರಿಗಳ–ದುರಾಚಾರಿಗಳ ಮುಖ ದರ್ಶನವೂ ಭಕ್ತನಿಗೆ ಹೊಲ್ಲ (ವ. 4). ಸಾಕ್ಷಾತ್ ಲಿಂಗದೇವನೂ ಇದಕ್ಕೆ ಹೊರತಲ್ಲ. ವ್ರತಭ್ರಷ್ಟನಾದ ರಾಮೇಶ್ವರ ಲಿಂಗದ ಸಹವಾಸವೂ ತ್ಯಾಜ್ಯ. 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವಾದಡೂ ವ್ರತಭ್ರಷ್ಟನೆಂದು ಬಿಡುವೆ' ಎನ್ನುವ ನಿಷ್ಠುರ ನಡೆ ಅಕ್ಕಮ್ಮನ ವಚನಗಳ ವೈಶಿಷ್ಟ್ಯವಾಗಿದೆ.

ಪಂಚೇಂದ್ರಿಯಗಳ ಉಪಟಳವನ್ನು ಪರಿಹರಿಸಿಕೊಂಡು ಷಡ್ಭಾವಗಳ ಬಂಧನವನ್ನು 'ಹರಿದಲ್ಲದೆ ಅರವತ್ತುನಾಲ್ಕು ನೆಲಕ್ಕೆ ಸಂಬಂಧಿಯಲ್ಲಿ' ಆಚಾರ ಶೀಲಗಳು ಮಾತಿನ ಕಂತೆಯಾಗದೇ ಅನುಷ್ಠಾನದ ರೀತಿಗಳಾಗಬೇಕೆನ್ನುವ ಅಕ್ಕಮ್ಮ ಖಂಡಿತವಾದಿ. ಜಾಗೃತ–ಸ್ವಪ್ನ–ಸುಷುಪ್ತಿಯಲ್ಲಿಯೂ ಭಕ್ತನು ವ್ರತ ಭ್ರಷ್ಟನಾಗಬಾರದು. ವ್ರತ ಭ್ರಷ್ಟರಿಗೆ ಉದ್ಧಾರದ ಹಾದಿ ಎಂದೆಂದಿಗೂ ಮುಚ್ಚಿದ ಬಾಗಿಲು (ವ. 26, 13) ಎನ್ನುವ ಅಕ್ಕಮ್ಮನ ಧೋರಣೆಯಲ್ಲಿ ವ್ರತನಿಷ್ಠೆಯ ಅಗಾಧ ಫಲ ಹೆಪ್ಪುಗಟ್ಟಿದೆ. ಮಾನವ ಸ್ವಭಾವದ ದೌರ್ಬಲ್ಯಗಳನ್ನು ವಿನಯವಾಗಿ ಒಪ್ಪಿಕೊಂಡು ಪರಿಷ್ಕಾರಕ್ಕಾಗಿ ಮಿಡಿಯುವ ಶರಣರ ಒಟ್ಟು ಧೋರಣೆಗೆ ಅಕ್ಕಮ್ಮನ ನಿಲುವು ದೂರವೆನಿಸುತ್ತದೆ.7 ಎಲ್ಲ ಶರಣರು ಅಂತರಂಗಶುದ್ಧಿಗೆ ಆತ್ಮಶುದ್ಧಿಗೆ. ವಿಶೇಷ ಪ್ರಾಶಸ್ತ್ಯವನ್ನು ನೀಡಿದ್ದಾರೆ. ವಿಚಾರಶುದ್ಧಿ, ಭಾವಶುದ್ಧಿ, ಆಚಾರಶುದ್ಧಿಗಳು ಭಕ್ತನ ಪ್ರಥಮ ಆದ್ಯತೆಗಳಾಗಿರಬೇಕು. ವ್ಯತಿರಿಕ್ತವಾದ 'ಲೆಕ್ಕವಿಲ್ಲದಷ್ಟು ವ್ರತ ಕಟ್ಟಳೆಯಿಲ್ಲದ ನೇಮ ಇವನೆಷ್ಟು ಮಾಡಿದಡೇನು?' (ವ. 22) ಅಂತರಂಗ ಸಾಕ್ಷಿಯಾಗಿ ನಡೆಸುವ ಸತ್ಯ–ಶುದ್ಧ ಆಚಾರವೇ ಮುತ್ರಿಯ ನಿಚ್ಚಣಿಕೆ ಎನ್ನುವ ಭಾವ ಅಕ್ಕಮ್ಮನ ವಚನಗಳ ಮೂಲ ಆಶಯವಾಗಿದೆ. ಅಕ್ಕಮ್ಮನ ಆಚಾರ ವಿಚಾರ ನಿಷ್ಠೆ ಮನುಷ್ಯನಲ್ಲಿ ನಿರಂತರ ಜಾಗೃತಿಯನ್ನು ಅಪೇಕ್ಷಿಸುತ್ತದೆ. ನೋಡುವ–ಆಡುವ–ಮಾಡುವ–ಮುಟ್ಟುವ ಪ್ರತಿಯೊಂದು ಮಾಟದಲ್ಲಿಯೂ ಕ್ರಿಯಾ–ಜ್ಞಾನ ಶುದ್ಧಿ ಸಾಮರಸ್ಯದ ಎಚ್ಚರ ಭಕ್ತನನ್ನು ನಿಯಂತ್ರಿಸಬೇಕೆನ್ನುವ ವಿಚಾರ ಅತ್ಯಂತ ಗಮನಾರ್ಹವಾಗಿದೆ .

ವೀರಶೈವ ಸಿದ್ಧಾಂತದ ಅತ್ಯುನ್ನತ ಪರಿಕಲ್ಪನೆ 'ಜಂಗಮ', ಜೀವಾತ್ಮ–ಪರಮಾತ್ಮನಾಗಿ ಲೋಕ ಕ್ಷೇಮಕ್ಕಾಗಿ ಲೌಕಿಕ ನೆಲೆಯಲ್ಲಿ ನೀರತಾವರೆಯಂತೆ, ನಡೆದಾಡುವ ಲಿಂಗರೂಪಿ ಜಂಗಮ. ಅಂಗನಿಸ್ಸಂಗವಾಗಿ ಅರಿವಿನ ಮೂರ್ತಿಯಾಗಿರುವ 'ಜಂಗಮ'ದ ತಾತ್ವಿಕ ನೆಲೆಯನ್ನು–ಲೌಕಿಕವನ್ನು ಹಲವಾರು ವಚನಗಳಲ್ಲಿ ಪ್ರತಿಪಾದಿಸಿದ್ದಾಳೆ (ವ. 124). ಎಲ್ಲ ವ್ರತಗಳಿಗೆಯೂ ಜಂಗಮ ಪ್ರಸಾದವೇ ಪ್ರಾಣ, ಆ ಜಂಗಮ ಪ್ರಸಾದಿಂದಲೇ ಮಹಾಘನಲಿಂಗಕ್ಕೆ ತೃಪ್ತಿಯೆಂದು ಕೊಂಡಾಡಿದ್ದಾಳೆ. ವ್ರತಹೀನರನ್ನು, ವೇಷಧಾರಿ ಡಾಂಭಿಕ ಭಕ್ತರನ್ನು ಅಕ್ಕಮ್ಮ ತೀಕ್ಷ್ಣವಾಗಿ ಖಂಡಿಸಿದ್ದಾಳೆ.

"ವೇಷ ಎಲ್ಲಿರದು? ಸೂಳೆಯಲ್ಲಿ ಡೊಂಬರಲ್ಲಿ ಬೈರೂಪನಲ್ಲಿರದೆ ? ವೇಷವ ತೋರಿ ಒಡಲ ಹೊರೆವ ದಾಸಿ ವೇಶಿಯ ಮಕ್ಕಳಿಗೆ ನಿಜ ಭಕ್ತಿ ಎಲ್ಲಿಯದೋ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ"8 ಮನುಷ್ಯ ದೇಹ ಸ್ವಭಾವದ ಪ್ರಾಕೃತಿಕ ಗುಣ–ದೋಷಗಳನ್ನು ಇತಿ–ಮಿತಿಗಳನ್ನು ಶರಣರು ಸರಿಯಾಗಿ ಅರ್ಥೈಸಿಕೊಂಡಂತೆ, ಪ್ರತಿಭೆ, ಕೌಶಲ್ಯ, ಆಸಕ್ತಿ, ಅನುಕೂಲ ಅಗತ್ಯಗಳಿಗೆ ತಕ್ಕಂತೆ ಪಾರಂಪರಿಕವಾಗಿ ನಡೆದುಬಂದಿರುವ ಜೀವನೋಪಾಯದ ಮಾರ್ಗಗಳನ್ನು ಗೌರವಿಸಿದರು. ಸಾಮರಸ್ಯದ ಬದುಕಿಗೆ ಪೂರಕವಾಗುವ ಎಲ್ಲ ವೃತ್ತಿಗಳನ್ನು ಸಮಾನ ನೆಲೆಯಲ್ಲಿ ಗೌರವಿಸಿ 'ವೃತ್ತಿ ಗೌರವ'ದ ಅರಿವು ಮೂಡಿಸಿದರು. ಲೌಕಿಕ ನೆಲೆಯಲ್ಲಿ ಹೊಟ್ಟೆ ಹೊರೆಯುವ ವಿಧಾನ ವ್ರತವಾಗಿದ್ದ ದುಡಿಮೆಯ ಅರ್ಥವನ್ನು ಉದಾತ್ತಗೊಳಿಸಿ ಪಾರಮಾರ್ಥಿಕ ಸಾಧನೆಯ ಸೋಪಾನವಾಗಿಸಿ 'ಕಾಯಕವೇ ಕೈಲಾಸ'ವೆಂದು ಸಾರಿದರು. ಕಾಯಕವನ್ನು ಮೌಲ್ಯವಾಗಿಸಿ

ದುಡಿಮೆಯ ಸಂಸ್ಕೃತಿಯನ್ನು ಕಟ್ಟಿದರು. ಸಮಷ್ಟಿಯ ಸಾಮರಸ್ಯದ ಬದುಕಿನ ಆದರ್ಶಗಳನ್ನು ದುಡಿಮೆಯಿಂದ ಸಾಧ್ಯವಾಗಿಸಿದರು. ದುಡಿಮೆಗೆ ದೈವತ್ವದ ದೀಕ್ಷೆ ನೀಡಿದರು. ಶರಣರು ಪ್ರತಿಪಾದಿಸಿದ 'ಕಾಯಕ'ದ ತಾತ್ವಿಕ ನೆಲೆಗಳನ್ನು ಪ್ರಾಯೋಗಿಕ ಸ್ವರೂಪವನ್ನು ವಚನಗಳಲ್ಲಿ ವಿವರಿಸಿದ್ದಾಳೆ. ಗುರು–ಲಿಂಗ–ಜಂಗಮಕ್ಕೂ ಕಾಯಕ ಕಡ್ಡಾಯ. 'ಗುರುದರ್ಶನ ಗುರುವಾದಡೆಯೂ ಕಾಯಕದಿಂದಲೇ ಜೀವನ್ ಮುಕ್ತಿ. ಗುರುದರ್ಶನ ಲಿಂಗಪೂಜೆ–ಜಂಗಮಸೇವೆ ಶಿವಭಕ್ತರ ಒಡನಾಟ ಧಾರ್ಮಿಕ ಚರ್ಚೆಗಳೆಲ್ಲವೂ ಭಕ್ತರಿಗೆ ಕಾಯಕದ ನಂತರದ ಆದ್ಯತೆಗಳಾಗಿರಬೇಕೆಂದು ಸ್ಪಷ್ಟವಾಗಿ ಹೇಳುವ ಅವಳ ಮಾತುಗಳು ಒಂದು ಕುಟುಂಬದ, ಒಂದು ಸಮುದಾಯದ, ಒಂದು ರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯ ನಿರಂತರ ದುಡಿಮೆಯ ಅನಿವಾರ್ಯತೆ ಇದೆಯೆಂಬ ಹೊಣೆಗಾರಿಕೆ ಪ್ರವೃತ್ತಿಯನ್ನು ಎತ್ತಿ ತೋರಿಸುತ್ತದೆ (ವ. 63), 'ಇಂದಿಗೆ ನಾಳಿಂಗೆ ಎಂಬ ಸಂದೇಹವ ಬಿಟ್ಟು ಬಂದುದ ಕೂಡಿಕೊಂಡು ಸದಾನಂದದಲ್ಲಿಪ್ಪ ಭಕ್ತನ ಮನೆಯಂಗಳವೇ ಕೈಲಾಸ' (ವ. 42) ಎನ್ನುವ ಅಪಾರ ಶ್ರದ್ಧೆಯುಳ್ಳ, ಅಕ್ಕಮ್ಮನು ಕೈಗೊಂಡಿರಬಹುದಾದ ಕಾಯಕದ ವಿವರ ಲಭ್ಯವಿಲ್ಲದಿದ್ದರೂ ಅಂದಿನ ಸಮಾಜದಲ್ಲಿ ರೂಢಿಯಲ್ಲಿದ್ದ ವೃತ್ತಿಗಳನ್ನು ಅನೇಕ ಜನಪದ ಕಾಯಕಗಳನ್ನು, ಯಾಚಕ ವೃತ್ತಿಗಳನ್ನು ಉಲ್ಲೇಖಿಸಿದ್ದಾಳೆ. 'ಅಸಿ ಮಸಿ ಕೃಷಿ ವಾಣಿಜ್ಯ ವಾಚಕ ಭಕ್ತರ ಪಡುಗ, ಪಾದತ್ರಾಣ ಪಹರಿ ಬಾಗಿಲು ಬೊಕ್ಕಸ ಬಿಯನ' (ವ. 11) ಚಾಟಿ ಗುಂಡು, ಬಂಧನ ಕಲಕೇತ ಯಾಚಕ ಪಗುಡಿ ಪರಿಹಸಕದಂಥ ಅನೇಕ ಅಂದಿನ ಪ್ರಚಲಿತ ವೃತ್ತಿಗಳನ್ನು (ವ. 50) ಪಶು–ಪಕ್ಷಿಗಳ ಗುಣ–ಸ್ವಭಾವದ ಹೋಲಿಕೆಗಳನ್ನು ನೀಡಿರುವುದು (ವ. 112, 113, 78), ರೂಢಿ–ಸಂಪ್ರದಾಯ, ಆಹಾರ ವಿಧಾನಗಳಿಗೆ ಸಂಬಂಧಿಸಿದ ಸಾಂದರ್ಭಿಕ ಉಲ್ಲೇಖಗಳನ್ನು ಗಮನಿಸಿದರೆ ಅಕ್ಕಮ್ಮನಿಗಿರುವ ಜಾನಪದ ಬದುಕಿನ ದಟ್ಟ ಪರಿಚಯ ಪ್ರಭಾವ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಕ್ಕಮ್ಮನು ದುಡಿವ ವರ್ಗಕ್ಕೆ ಸಂಬಂಧಿಸಿದವಳಾಗಿರುವ ಸಾಧ್ಯತೆಯನ್ನು ಪರಿಶೀಲಿಸಬೇಕಾಗುತ್ತದೆ.

ಅಕ್ಕಮ್ಮ ಸ್ವತಂತ್ರ ಮನೋಧರ್ಮದ ನಿರ್ಭೀತ ಶರಣೆ, ಸಾಮಾಜಿಕ ಬದ್ಧತೆಯುಳ್ಳ ವಿಚಕ್ಷಣಮತಿ. ವ್ಯವಸ್ಥೆಯ ಸ್ಥಾಪಿತ ಮೌಲ್ಯಗಳೊಂದಿಗೆ, ಮನುಷ್ಯ ಸ್ವಭಾವದ ದೌರ್ಬಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳದ ಖಂಡಿತವಾದಿ. ಶರಣ ಧರ್ಮದಲ್ಲಿ ಅಗಾಧ ನಿಷ್ಠೆಯುಳ್ಳ ಅಕ್ಕಮ್ಮ ಶರಣರ ಕ್ರಾಂತಿಕಾರಿ ವಿಚಾರಗಳಾದ ಅಸಮಾನತೆ–ಲಿಂಗಭೇದ, ಜಾತಿ ವ್ಯವಸ್ಥೆಯ ದಮನಕಾರಿ ಫಲಿತಗಳಿತ್ತ ಆಧ್ಯಾತ್ಮ ಸಾಧನೆಯ ಆಂತರಿಕ ಸಂಘರ್ಷ ಒಟ್ಟಾರೆ ವ್ಯವಸ್ಥೆಯ ಪ್ರತಿಗಾಮಿ ಧೋರಣೆಗಳತ್ತ ಮೌನವಾಗಿರುವುದು ಕುತೂಹಲಕಾರಿಯೆನಿಸುತ್ತದೆ. ಹೆಣ್ಣನ್ನು ಹೊನ್ನು–ಮಣ್ಣುಗಳೊಂದಿಗೆ ಸಮೀಕರಿಸುವ ಸಾಂಪ್ರದಾಯಿಕ ಆಲೋಚನಾ ವಿಧಾನವನ್ನು ಲಕ್ಕಮ್ಮ–ಲಿಂಗಮ್ಮ–ಸತ್ಯಕ್ಕ–ಗೊಗ್ಗವ್ವ–ಮಹಾದೇವಿಯಕ್ಕ ಮುಂತಾದ ಶರಣೆಯರು ತೀವ್ರವಾಗಿ ಖಂಡಿಸಿ ಲಿಂಗ ಭೇದವನ್ನು ನಿರಾಕರಿಸಿದ ಸಂದರ್ಭದಲ್ಲಿಯೇ ಬದುಕಿದ ಅಕ್ಕಮ್ಮ ಮತ್ತೆ ಸಾಂಪ್ರದಾಯಿಕವಾಗಿ ಯೋಚಿಸುವುದು ಆತಂಕಕಾರಿಯೆನಿಸಬಹುದು. (ವ. 94, 151, 144), 'ಪುರುಷನ ಆಚಾರದಲ್ಲಿ ಸತಿ ನಡೆಯಬೇಕಲ್ಲದೆ ಸತಿಗೆ ಸ್ವತಂತ್ರ ಉಂಟೆ?' (ವ. 144) ಎಂದು ಹೇಳುವ ಮಾತು ಅಂದಿನ ಕಾಲದಲ್ಲಿ ಪ್ರತಿಯೊಂದು ದೈವ ಸತಿಗೊಂದು ದೈವ, ಪತಿಯ ನಂಬಿಕೆ ಬೇರೆ ಸತಿಯ ನಂಬಿಕೆ ಬೇರೆ, ಎನ್ನುವಂತೆ ಆಳರಸ–ಅರಸಿಯರೇ ಇಬ್ಬರು ಸ್ವತಂತ್ರವಾಗಿ ಬೇರೆ ಬೇರೆ ಒಂದೊಂದು ರೀತಿಯ ಧರ್ಮವನ್ನು ಅನುಸರಿಸಿದ್ದಕ್ಕೆ ಆಚರಣೆಗಳನ್ನು ಕೈಕೊಂಡಿದ್ದಕ್ಕೆ ಐತಿಹಾಸಿಕ ದಾಖಲೆಗಳು ದೊರೆಯುತ್ತವೆ. ಇದನ್ನು ಎಲ್ಲ ಶರಣರು ಖಂಡಿಸಿದ್ದಾರೆ. ಅಕ್ಕಮ್ಮ ಹೇಳುವುದು ಕೂಡ ಸತಿಯಾದವಳು ಪತಿಯನ್ನು ಅನುಸರಿಸಬೇಕು ಎಂದು ಹೇಳಿರುವುದು ಇಂತಹ ಪ್ರಸಂಗಗಳನ್ನು ಕುರಿತಾಗಿಯೇ ಹೊರತು ಬೇರೇನೂ ಅಲ್ಲ. ಹೆಣ್ಣು–ಹೊನ್ನು–ಮಣ್ಣಿಗಾಗಿ ವ್ರತವೆಂಬ ನೇಮವ ಮಾಡಿಕೊಳ್ಳಬಹುದೆ?

ಅಕ್ಕಮ್ಮನ ಕಠೋರ ವಿಮರ್ಶೆಯ ನುಡಿಗಳು ಗುರುವರ್ಗವನ್ನೂ ಸಹ ಬಿಡುವುದಿಲ್ಲ. ಡಾಂಬಿಕ ವೇಷಧಾರಿ ಲಾಂಛನಧಾರಿಗಳಾದ ಆಷಾಢಭೂತಿ ವಿರಕ್ತರನ್ನು (ವ. 111) ಹಿರಿತನವಿಲ್ಲದ ಹಿರಿಯರನ್ನು, ಜ್ಞಾನಸಂಪಾದನೆಗೆ ವಿಮುಖರಾಗಿ ಶುಷ್ಕ ಸಂಪ್ರದಾಯಗಳಿಗೆ ಜೋತುಬಿದ್ದ ಧಾರ್ಮಿಕ ಮೂಲಭೂತವಾದಿಗಳನ್ನು ನಿರ್ಭಯವಾಗಿ ವಿಡಂಬಿಸುತ್ತಲೇ ಅಕ್ಕಮ್ಮ ಶರಣರ ವೈಚಾರಿಕ ಕ್ರಾಂತಿಯ, ಸಾಮಾಜಿಕ ಸಾಮುದಾಯಿಕ ಕ್ರಾಂತಿಯ ಶಕ್ತಿಯುತ ಸ್ತ್ರೀ ಮಾದರಿಯಾಗಿ, ಹೆಣ್ತನದ ಪ್ರಬಲ ಶಕ್ತಿಯಾಗಿ, ಸುಜ್ಞಾನದ ಖನಿಯಾಗಿ, ಮಹಾದೇವಿಯಕ್ಕನ ತರುವಾಯ ಕಳಶಪ್ರಾಯವಾಗಿ ಶೋಭಿಸುತ್ತಾಳೆ.

**ಅಡಿಟಿಪ್ಪಣಿಗಳು :**

1. ಶಿವಶರಣೆಯರ ವಚನ ಸಂಪುಟ–5, ಪುಟ–237
2. ಕ. ಕ. ಚರಿತೆ–1, 1992, ಪುಟ. 241
3. ಶಿ ಶ ವ ಸಂ. ಡಾ. ಆರ್. ಸಿ.ಹಿ. ಪ್ರ.–1971
4. ಶಿವಶರಣೆಯರ ವಚನ, ಸಂ. ಡಾ. ವೀರಣ್ಣ ರಾಜೂರ
5. ಶಿವಶರಣೆಯರ ವಚನ ಸಂಪುಟ–5, ವ. 47. ಪುಟ–30
6. ಶಿವಶರಣೆಯರ ವಚನ ಸಂಪುಟ–5, ಸಂ. ಡಾ. ವೀರಣ್ಣ ರಾಜೂರ ಪುಟ 30
7. ಶಿವಶರಣೆಯರ ವಚನ ಸಂಪುಟ–5, ಸಂ. ಡಾ. ವೀರಣ್ಣ ರಾಜೂರ ಪುಟ– 129
8. ಶಿವಶರಣೆಯರ ವಚನ ಸಂಪುಟ–5 ಸಂ. ಡಾ. ವೀರಣ್ಣ ರಾಜೂರ, ಪುಟ– 129
9. ಶಿವಶರಣೆಯರ ವಚನ ಸಂಪುಟ–5, ಸಂ. ಡಾ. ವೀರಣ್ಣ ರಾಜೂರ ಪುಟ– 123